# ಪ್ರಶ್ನೆ:

# “ಯೇಸುವು ಅಂಥ ಒಳ್ಳೆಯ ಮನುಷ್ಯನಾಗಿದ್ದರೆ, ಸಾಮಾನ್ಯ ಅಪರಾಧಿಯಂತೆ ಆತನು ಮರಣ ಹೊಂದಿದ್ದು ಯಾಕೆ?”

## ಉತ್ತರ:

ನಾವು ಕಲ್ವಾರಿಯ ಬಗ್ಗೆ ಯೋಚಿಸುವಾಗ, “ಯೇಸುವು ಅಂಥ ಒಳ್ಳೆಯ ಮನುಷ್ಯನಾಗಿದ್ದರೆ, ಆತನು ಸಾಮಾನ್ಯ ಅಪರಾಧಿಯಂತೆ ಮರಣ ಹೊಂದಿದ್ದು ಯಾಕೆ?” ಎಂದು ಪ್ರಶ್ನಿಸಲು ಮುಂದೆ ಬರುತ್ತೇವೆ.

ವಿಶಾಲ - ಕಣ್ಣಿನ ಒಬ್ಬ ಬಾಲಕಿ ಒಮ್ಮೆ ಈ ರೀತಿಯಲ್ಲಿ ಪ್ರಶ್ನೆ ಕೇಳಿದಳು: “ಯೇಸು ಯಾವುದೇ ತಪ್ಪನ್ನು ಮಾಡಿರದಿದ್ದರೂ, ಯಾಕೆ ಆತನು ಶಿಲುಬೆಗೆ ಹಾಕಲ್ಪಟ್ಟನು? ಅದು ನನಗೆ ನ್ಯಾಯವಾಗಿ ತೋರುವುದಿಲ್ಲ.” ಇದು ಅರ್ಥಗರ್ಭಿತ ವಾದ ಪ್ರಶ್ನೆಯಾಗಿರುವದಲ್ಲವೇ?

ಆದು ಅರ್ಥಗರ್ಭಿತವಾದದ್ದಾಗಿದೆ. ಮೊದಲನೆಯದು, ಯಾಕಂದರೆ ಯೇಸುವು ಒಬ್ಬ ಒಳ್ಳೆಯ ಮನುಷ್ಯನಾಗಿದ್ದನು. ಚರಿತ್ರೆಯ ಹೆಚ್ಚಾದ ಎಲ್ಲಾ ನಾಯಕರಿಗೆ ಮಣ್ಣಿನ ಪಾದಗಳಿದ್ದವು. ಅವರು ದೊಡ್ಡವರಾಗಿದ್ದರು, ಆದರೆ ಅವರಲ್ಲಿ ತಪ್ಪುಗಳಿದ್ದವು. ಆದರೆ ಯೇಸುವಿಗಿರಲಿಲ್ಲ. ಆತನು ಒಳ್ಳೆಯ ಮನುಷ್ಯನಾಗಿದ್ದನು ಎಂಬುದನ್ನು ಯಾರೂ ಅಲ್ಲಗಳೆದಿರುವದಿಲ್ಲ. ಅವಿಶ್ವಾಸಿಯಿಂದ ಆತನು ಸ್ವಲ್ಪ ವಿಲಕ್ಷಣವಾಗಿದ್ದಾನೆಂದು ಅಥವಾ ಆತನ ಜೀವನ ಮತ್ತು ಬೋಧನೆಗಳು ಕಾರ್ಯಾಚರಣೆಗೆ ತರಲಾಗದಂಥವುಗಳು ಎಂದು ಯೋಚಿಸಲ್ಪಡಬಹುದು. ಆದರೆ ಆತನು *ಒಳ್ಳೆಯ ಮನುಷ್ಯನಾಗಿದ್ದನು* ಎಂಬುದನ್ನು ಯಾರೂ ಅಲ್ಲಗಳೆಯಲಾರರು.

ಪ್ರಶ್ನೆಯು ಅರ್ಥಗರ್ಭಿತವಾದದ್ದಾಗಿರುತ್ತದೆ, ಯಾಕಂದರೆ ಯೇಸುವು ಸಾಮಾನ್ಯ ಅಪರಾಧಿಯಂತೆ ಶಿಲುಬೆಗೆ ಹಾಕಲ್ಪಟ್ಟನು. ಪುರಾತನ ಜಗತ್ತಿನಲ್ಲಿ ಅನೇಕರು ಶಿಲುಬೆಗೆ ಹಾಕಲ್ಪಟ್ಟರು. ತೂರಿಗೆ ವಿರುದ್ಧವಾದ ಹೋರಾಟದಲ್ಲಿ ದೊಡ್ಡ ಅಲೆಕ್ಸಾಂಡರನು ತನ್ನ ವೈರಿಗಳಲ್ಲಿ ಒಂದು ಸಾವಿರ ಜನರನ್ನು ಶಿಲುಬೆಗೆ ಹಾಕಿಸಿದನು ಮತ್ತು, ಜೊಸೆಫಸನ ಪ್ರಕಾರವಾಗಿ, ಕ್ರಿ.ಶ. 70ರಲ್ಲಿ ರೋಮನ್‌ರು ಅಂತಿಮವಾಗಿ ಯೆರೂಸಲೇಮನ್ನು ವಶಪಡಿಸಿಕೊಂಡಾಗ, ಅವರು ಆ ಪಟ್ಟಣದ ಗೋಡೆಗಳ ಮೇಲೆ ಮೂವತ್ತು ಸಾವಿರ ಯೆಹೂದಿ ಪುರುಷರನ್ನು ಶಿಲುಬೆಗೆ ಹಾಕಿದರು.[1]

ಇನ್ನೊಂದು ಅರ್ಥದಲ್ಲಿ, ಯೇಸುವಿನ ಮರಣವು ಒಬ್ಬ "ಸಾಮನ್ಯ" ಅಪರಾಧಿಯ ಮರಣವಾಗಿರಲಿಲ್ಲ. ರೋಮನ್‌ರಲ್ಲಿ ಶಿಲುಬೆಗೆ ಹಾಕುವುದು ಸಾಮಾನ್ಯವಾಗಿತ್ತು, ಆದರೆ ಅದು "ಗುಲಾಮರಿಗಾಗಿ, ಪರದೇಶದವರಿಗಾಗಿ, ಅಥವಾ ಕಡಿಮೆ ತರಗತಿಯ ಅಪರಾಧಿಗಳಿಗಾಗಿ" ಕಾದಿರಿಸಲ್ಪಟ್ಟಿತ್ತು. ರೋಮನ್ ನಾಗರಿಕರು ಸಾಮಾನ್ಯವಾಗಿ ಶಿಲುಬೆಗೆ ಹಾಕಲ್ಪಡುತ್ತಿರಲಿಲ್ಲ.[2] ಹಾಗಾದರೆ ಶಿಲುಬೆಗೆ ಹಾಕಲ್ಪಡುವುದು "ಸಾಮಾನ್ಯ ಅಪರಾಧಿಗಳಿಗಾಗಿ ಇರುತ್ತಿದ್ದಿಲ್ಲ," ಆದರೆ "ಅಸಾಮಾನ್ಯವಾದ ಅಪರಾಧಿಗಳಿಗಾಗಿ" ಇರುತ್ತಿತ್ತು; ಮಾನವತೆಯ ಕೀಳು ತರಗತಿಯ ಕಸದಂತೆ ಇದ್ದವರಿಗಾಗಿ ಕಾದಿರಿಸಲ್ಪಟ್ಟಿತು. ಅಂಥವರಿಗೆ, ಅದು ಅಸಾಮಾನ್ಯವಾದ ನಾಚಿಕೆಪಡಿಸುವ, ನೋವಿನ, ಹೆಚ್ಚಿಸಿದ ಮರಣವಾಗಿತ್ತು.

ಯೇಸುವಿನಂತೆ ಸಾವಿರಾರು ಜನರು ಶಿಲುಬೆಯ ಮೇಲೆ ಸತ್ತರು, ಒಳ್ಳೆಯ ಮನುಷ್ಯನಾಗಿದ್ದ ಆತನು, ಮಾನವ ಜನಾಂಗದ ಕಸದಂತೆ ಯಾಕೆ ಮರಣ ಹೊಂದಿದನು?

ಯೇಸುವು ಶಿಲುಬೆಗೆ ಹಾಕಲ್ಪಟ್ಟು ಇತರರಂತೆಯೇ ಮರಣ ಹೊಂದಿದ್ದರೆ, ನಮಗಾಗಿ ಅ ಮರಣದಲ್ಲಿ ಯಾವ ಬೆಲೆಯೂ ಇರುತ್ತಿರಲಿಲ್ಲ. ಕ್ರಿಸ್ತನ ಮರಣವು ಅನೇಕ ರೀತಿಗಳಲ್ಲಿ *ಅದ್ವಿತೀಯವಾದದ್ದರ* ಮೇಲೆ ಕ್ರೈಸ್ತತ್ವದ ನಿರೀಕ್ಷೆಯು ಅವಲಂಭಿಸಿರುತ್ತದೆ. ತೋರಿಕೆಯಲ್ಲಿ ಆತನ ಮರಣವು ಇತರ ಅನೇಕರ ಮರಣದಂತೆ ಇರುವುದು, ಆದರೆ ವಾಸ್ತವಿಕತೆಯಲ್ಲಿ ಅದು ಭಿನ್ನವಾದದ್ದಾಗಿತ್ತು.

## ಅದು ನಿರ್ದೋಷಿಯಾದ ಮನುಷ್ಯನ ಮರಣವಾಗಿತ್ತು

ಯೇಸುವಿನ ಮರಣವು ಭಿನ್ನವಾದದ್ದಾಗಿತ್ತು ಯಾಕಂದರೆ ಅದು ನಿರ್ದೋಷಿಯಾದ ಮನುಷ್ಯನ ಮರಣವಾಗಿತ್ತು.

ದಂಡನೆಗೆ ಯೋಗ್ಯವಾದದ್ದನ್ನು ಯಾವುದನ್ನೂ ಯೇಸುವು ಮಾಡಿರಲಿಲ್ಲವೆಂದು ಸುವಾರ್ತೆಗಳು ಸ್ಪಷ್ಟಪಡಿಸುತ್ತವೆ, *ಆತನಿಗೆ ವಿರುದ್ಧವಾಗಿ ಸುಳ್ಳುಸಾಕ್ಷಿ ಹೇಳಲು ಯೇಸುವಿನ ವೈರಿಗಳು ಯಾರನ್ನೂ ಕಂಡುಕೊಳ್ಳಲಿಲ್ಲ* (ಮತ್ತಾಯ 26:59, 60). ಸುಳ್ಳು ಹೇಳುವವರು ಸಹ ಆತನ ಮೇಲೆ ದೂರು ಹೇಳಲಿಕ್ಕೆ ಏನನ್ನೂ ಕಂಡು ಕೊಳ್ಳದಷ್ಟು ಯೇಸುವು ನಿರಪರಾಧಿಯಾಗಿದ್ದನು. *ರೋಮನ್ ಅಧಿಕಾರಿಗಳು, ಪಿಲಾತ - ಮತ್ತು ಹೆರೋದನು, ಯೇಸುವು ನಿರ್ದೋಷಿಯೆಂದು ಕಂಡುಕೊಂಡರು* (ಲೂಕ 23:14, 15). ಯೇಸುವಿನ ಅಪರಾಧದ ಬಗ್ಗೆ ಇಲ್ಲವೇ ನಿರಪರಾಧ ತತ್ವದ ಬಗ್ಗೆ ಯಾರಾದರೂ ನಿರ್ಣಯಿಸಬಹು ದಾದವರಾಗಿದ್ದರೆ ಅವರು ಪಿಲಾತ ಮತ್ತು ಹೆರೋದ ಆಗಿದ್ದರು. ಆದರೆ ಅವರೇ ಯೇಸುವು ಅಪರಾಧಿಯಲ್ಲ ಎಂದು ಇಬ್ಬರೂ ಹೇಳಿದರು. *ಯೇಸುವು ನಿರಪರಾಧಿಯಾಗಿದ್ದಾನೆಂದು ಪಿಲಾತನ ಹೆಂಡತಿ ಹೇಳಿದಳು!* "... ನೀನು ಆ ಸತ್ಪುರುಷನ ಗೊಡವೆಗೆ ಹೋಗಬೇಡ ..." (ಮತ್ತಾಯ 27:19) ಎಂದು ಆಕೆ ತನ್ನ ಗಂಡನಿಗೆ ಹೇಳಿ ಕಳುಹಿಸಿದಳು. *ಯೇಸುವು ಪ್ರಾಣಬಿಟ್ಟಾಗ ಆತನ ಸಿಲುಬೆಯ ಬಳಿಯಲ್ಲಿದ್ದ ಶತಾಧಿಪತಿಯು ಆತನ ನಿರಪರಾಧತ್ವವನ್ನು ಗುರುತಿಸಿದನು.* ಯೇಸು ಪ್ರಾಣಬಿಟ್ಟ ಮೇಲೆ ಶತಾಧಿಪತಿಯು "ಈ ಮನುಷ್ಯನು ನಿಶ್ಚಯವಾಗಿ ನಿರಪರಾಧಿಯೆ ಸರಿ" (ಲೂಕ 23:47; "ನಿಶ್ಚಯ ವಾಗಿ ಈತನು ಸತ್ಪುರುಷನೇ ನಿಜ," KJV) ಎಂದು ದೇವರನ್ನು ಕೊಂಡಾಡಿದನು. ಯೇಸು ಮರಣ ಹೊಂದಿದಾಗ ಈ ಕಠಿಣನಾದ ಶತಾಧಿಪತಿಯು ಆತನು ನಿರಪರಾಧಿ ಎಂದು ನಿಶ್ಚಯಹೊಂದಿಕೊಂಡರೆ, ನಾವೂ ಹಾಗೆ ಮಾಡಬೇಕಲ್ಲವೇ! *ಯೇಸುವಿನೊಂದಿಗೆ ಶಿಲುಬೆ ಹಾಕಲ್ಪಪಟ್ಟಿದ್ದ ಕಳ್ಳರಲ್ಲಿ ಒಬ್ಬನು ಆತನು ಅಲ್ಲದ್ದೇನೂ ಮಾಡಲಿಲ್ಲ, ನಿರಪರಾಧಿಯಾಗಿದ್ದಾನೆ ಎಂದು*

*ಒಪ್ಪಿಕೊಂಡನು:* "ಈತನಾದರೋ, ಅಲ್ಲದ್ದೇನೂ ಮಾಡಲಿಲ್ಲ" (ಲೂಕ 23:41). ಯೇಸುವು ಸಂಪೂರ್ಣವಾಗಿ ನಿರ್ದೋಷಿಯಾಗಿದ್ದನು.

## ಅದು ಪಾಪವಿಲ್ಲದ ಮನುಷ್ಯನ ಮರಣವಾಗಿತ್ತು

ಯೇಸುವಿನ ಮರಣವು ಭಿನ್ನವಾಗಿತ್ತು, ಯಾಕಂದರೆ ಅದು ಪಾಪವಿಲ್ಲದ ಮನುಷ್ಯನ ಮರಣವಾಗಿತ್ತು, ಯೇಸುವು ಶಿಲುಬೆಗೆ ಹಾಕಲ್ಪಟ್ಟ ಅಪರಾಧದ ಅಪರಾಧಿಯಾಗಿರಲಿಲ್ಲ. ಅದು ಅಸಾಮಾನ್ಯವಾದದ್ದಾಗಿದೆ, ಆದರೆ ಅದ್ವಿತೀಯವಾದದ್ದಾಗಿರಲಿಲ್ಲ. ಇಲ್ಲಿಯವರೆಗೆ ಯೇಸುವಿನ ಬಗ್ಗೆ ನಾವು ಹೇಳಿದ್ದನ್ನು ಇತರರ ಬಗ್ಗೆಯೂ ಹೇಳಬಹುದು: ಆತನು ಒಬ್ಬ ನಿರಪರಾಧಿ ಮಾನವನಾಗಿ ಸತ್ತನು.

ಬೇರೆ ಯಾರಿಗೂ ನಾವು ಇದನ್ನು ಹೇಳಲಾರೆವು. ಪಾಪ ಮಾಡದೇ ಯೇಸು ಮಾತ್ರವೇ ಜೀವಿಸಿದನು ಮತ್ತು ಮರಣಹೊಂದಿದನು. ಆತನು ಶಿಲುಬೆಗೆ ಹಾಕಲ್ಪಟ್ಟಾಗ ಯಾವುದೇ ಅಪರಾಧದ ನಿರಪರಾಧಿಯಾಗಿದ್ದನು, ಅಷ್ಟೇ ಅಲ್ಲ; ಆತನು ತನ್ನ ಜೀವನ ಪೂರ್ತಿ ಯಾವುದೇ ಪಾಪವಿಲ್ಲದೆ ನಿರ್ದೋಷಿಯಾಗಿದ್ದನು!

ಯೇಸುವು, "ನಮ್ಮ ಹಾಗೆ ಶೋಧನೆಗೆ ಗುರಿಯಾದನು, ಪಾಪ ಮಾತ್ರ ಮಾಡಲಿಲ್ಲ" ಎಂದು ಇಬ್ರಿಯರಿಗೆ ಬರೆದ ಗ್ರಂಥಕರ್ತನು ಹೇಳುತ್ತಾನೆ (ಇಬ್ರಿಯ 4:15). ಅರಣ್ಯದಲ್ಲಿ ಯೇಸುವು ಸೈತಾನನ ಶೋಧನೆಗಳನ್ನು ತಿರಸ್ಕರಿಸಿದನು. ಆತನು "ಪ್ರತಿಯೊಂದು ವಿಷಯದಲ್ಲಿ ನಮ್ಮ ಹಾಗೆ ಶೋಧನೆಗೆ ಗುರಿಯಾದನು" (RSV), ಆದರೂ ಪಾಪವಿಲ್ಲದವನಾಗಿದ್ದನು.

"ನನ್ನಲ್ಲಿ ಪಾಪವನ್ನು ತೋರಿಸಿಕೊಡುವವರು ನಿಮ್ಮೊಳಗೆ ಯಾರಿದ್ದಾರೆ?" (ಯೋಹಾನ 8:46) ಎಂದು ಯೇಸು ಪ್ರಶ್ನೆ ಮಾಡಿದನು. ಆಗ ಯಾರೂ ಇರಲಿಲ್ಲ, ಮತ್ತು ಅಂದಿನಿಂದ ಹಾಗೆ ಮಾಡಲು ಯಾರೂ ಇರುವದಿಲ್ಲ. ಯೇಸುವು ಪಾಪರಹಿತನಾಗಿದ್ದುದರಿಂದ, ಆತನ ಮರಣವು ಅದ್ವಿತೀಯವಾದದ್ದಾಗಿದೆ!

## ಅದು ಮುಂತಿಳಿಸಲ್ಪಟ್ಟಿತು

ಯೇಸುವಿನ ಮರಣವು ಭಿನ್ನವಾಗಿತ್ತು ಯಾಕಂದರೆ ಅದು ಮುಂತಿಳಿಸಲ್ಪಟ್ಟಿತ್ತು. ಆತನು ತನ್ನ ಸ್ವಂತ ಮರಣವನ್ನು ಮುನ್ನೋಡಿದನು ಮತ್ತು ಮುಂತಿಳಿಸಿದನು. ಪೇತ್ರನು ಮಹಾ ಅರಿಕೆಯನ್ನು ಮಾಡಿದನಂತರ ಮತ್ತು ಯೇಸುವು ಸಭೆಯ ಪ್ರಾರಂಭದ ಬಗ್ಗೆ ಮಾತಾಡಿದನಂತರ, "ಯೇಸುವು ತಾನು ಯೆರೂಸಲೇಮಿಗೆ ಹೋಗಿ ಅಲ್ಲಿ ... ಕೊಲ್ಲಲ್ಪಟ್ಟು ಮೂರನೆಯ ದಿನದಲ್ಲಿ ಜೀವಿತನಾಗಿ ಎಬ್ಬಿಸಲ್ಪಡಬೇಕೆಂದು ತನ್ನ ಶಿಷ್ಯರಿಗೆ ತಿಳಿಸುವದಕ್ಕೆ" ಪ್ರಾರಂಭಿಸಿದನು (ಮತ್ತಾಯ 16:21). ಈ ಸಮಯದಲ್ಲಿ, ಆತನ ಕೊಲ್ಲಲ್ಪಡಬೇಕೆಂಬ ಬೇಡಿಕೆ ಹೆಚ್ಚಾಗಿ ಪ್ರಸಾರವಾಗಿರಲಿಲ್ಲ. ಯೇಸುವಿನ ಮಹಾ ಪ್ರಸಿದ್ಧಿಯ ಅತಿದೊಡ್ಡ ಘಟನೆಯು, ಯೆರೂಸಲೇಮನ್ನು ಜಯೋತ್ಸವದೊಂದಿಗೆ ಪ್ರವೇಶಿಸುವುದು, ಆತನ ಮುಂದೆ ಇತ್ತು. ಆದಾಗ್ಯೂ ಆತನು ತಾನು ಸಾಯುವೆನೆಂದು ತಿಳಿದಿದ್ದನು ಮತ್ತು ಅದನ್ನು ಶಿಷ್ಯರಿಗೆ ಹೇಳಿದನು.

ನಿಜವಾಗಿಯೂ, ಆತನ ಮರಣವು ಬಹಳ ಸಮಯದ ಹಿಂದೆಯೇ ಮುಂತಿಳಿಸಲ್ಪಟ್ಟಿತು. ಆತನು ಮರಣ ಹೊಂದುವನೆಂದು ಹಳೇ ಒಡಂಬಡಿಕೆಯ ಪ್ರವಾದಿಗಳು ಪ್ರವಾದನೆ ಹೇಳಿದ್ದರು, ಉದಾಹರಣೆಯಾಗಿ, ಸಿಪಾಯಿಗಳು ಯೇಸುವಿನ ಬಟ್ಟೆಗಳನ್ನು ಹಂಚಿಕೊಂಡಾಗ (ಯೋಹಾನ 19:24), "ನನಗೆ ನೀರಡಿಕೆಯಾಗಿದೆ"

ಎಂದು ಯೇಸು ಹೇಳಿದಾಗ (ಯೋಹಾನ 19:28), ಸಿಪಾಯಿಗಳು ಯೇಸುವಿನ ಕಾಲುಗಳನ್ನು ಮುರಿಯದೇ ಇದ್ದಾಗ (ಯೋಹಾನ 19:36), ಮತ್ತು ಅವರು ಆತನ ಪಕ್ಕೆಯನ್ನು ತಿವಿದಾಗ (ಯೋಹಾನ 19:37), ಹಳೇ ಒಡಂಬಡಿಕೆಯ ಪರಿಶುದ್ಧ ಬರಹಗಳ ನೆರವೇರಿದವೆಂದು ಯೋಹಾನನು ಸೂಚಿಸಿದನು.

ಹೊಸ ಒಡಂಬಡಿಕೆಯ ಪ್ರೇರಿತ ಪ್ರಸಂಗಿಗಳು ಯೇಸುವಿನ ಮರಣವು ಪರಿಶುದ್ಧ ಬರಹಗಳನ್ನು ನೆರವೇರಿಸಿತೆಂದು ತೋರಿಸಿದರು. ಅವರು ಯೆಹೂದ್ಯರಿಗೆ ಮಾತಾಡಿದಾಗ ಯೇಸುವು ಕ್ರೂಜಿಸಲ್ಪಟ್ಟ *ಮೆಸ್ಸೀಯನೆಂದು* ರುಜುವಾತು ಪಡಿಸ ಬೇಕಾಗಿದ್ದರಿಂದ ಅವರು ಹಾಗೆ ಮಾಡಬೇಕಾಗಿತ್ತು. ಯೋಹೂದ್ಯರು ಅದನ್ನು ಅರ್ಥ ಮಾಡಿಕೊಳ್ಳದೇ ಹೋದರು. ಮೆಸ್ಸೀಯನ ಬಗ್ಗೆ ಅವರ ತತ್ವವು ದೊಡ್ಡ ಅರಸನು ರೋಮನ್ ಸೈನ್ಯದ ವಿರುದ್ಧ ಅವರನ್ನು ಯುದ್ಧದಲ್ಲಿ ನಡಿಸುವದರಿಂದ ಉಳಿಸುವದಕ್ಕೆ ಬರುವನು ಎಂಬುದಾಗಿತ್ತು. ಶಿಲುಬೆಯ ಮೇಲೆ ಮೆಸ್ಸೀಯನ ಮರಣವು ಅವರ ಯೋಚಿಸುವಿಕೆಗೆ ಬಾಹಿರವಾದದ್ದಾಗಿತ್ತು, ಯಾಕಂದರೆ ಶಿಲುಬೆಗೆ ಹಾಕಲ್ಪಟ್ಟವರು ಶಾಪಗ್ರಸ್ಥರೆಂದು ಅವರು ನಂಬಿದ್ದರು. ಆದುದರಿಂದ, ಪಿಸಿದ್ಯದ ಅಂತಿಯೋಕ್ಯದಲ್ಲಿ ಪೌಲನು ಯೆಹೂದ್ಯರಿಗೆ ಹೀಗೆ ಹೇಳಿದನು: "ಯೆರೂಸಲೇಮಿನಲ್ಲಿ ವಾಸವಾಗಿ ರುವವರೂ ... ಆತನನ್ನಾಗಲಿ ... ಪ್ರವಾದಿಗಳ ವಾಕ್ಯಗಳನ್ನಾಗಲಿ ಗ್ರಹಿಸದೆ ... ಆತನನ್ನು ಅಪರಾಧಿಯೆಂದು ತೀರ್ಪು ಮಾಡಿ ಆ ವಾಕ್ಯಗಳನ್ನೇ ನೆರವೇರಿಸಿದರು" (ಅಪೊಸ್ತಲರ ಕೃತ್ಯಗಳು 13:27). ಯೇಸುವು ಶಿಲುಬೆಗೆ ಹಾಕಲ್ಪಟ್ಟಿದ್ದು *ಪರಿಶುದ್ಧ ಬರಹಗಳ* ನೆರವೇರಿಕೆಯಾಗಿತ್ತು.

ಯೇಸುವು ಮರಣ ಹೊಂದಿದಾಗ ಯಾವ ಪರಿಶುದ್ಧ ಬರಹಗಳು ನೆರವೇರಿದವು? ಹಳೇ ಒಡಂಬಡಿಕೆಯ ಒಂದು ಅಧ್ಯಾಯನವನ್ನು - ಕೀರ್ತನೆ 22ನ್ನು ಯೋಚಿಸೋಣ. ಯೇಸು ಶಿಲುಬೆಯ ಮೇಲೆ ಹೇಳಿದ, "ನನ್ನ ದೇವರೇ, ನನ್ನ ದೇವರೇ ಯಾಕೆ ನನ್ನನ್ನು ಕೈಬಿಟ್ಟಿದ್ದೀ?" (ವಚನ 1) ಎಂಬ ಮಾತುಗಳಿಂದ ಪ್ರಾರಂಭವಾಗುತ್ತದೆ. ಆ ಮೇಲೆ "ಜನರಿಂದ ತಿರಸ್ಕರಿಸಲ್ಪಟ್ಟ ಮತ್ತು ಧಿಕ್ಕರಿಸಲ್ಪಟ್ಟ" ಮೆಸ್ಸೀಯನ ಬಗ್ಗೆ, ಆತನು ಅಪಹಾಸ್ಯ ಮಾಡಲ್ಪಟ್ಟಿದ್ದರ ಬಗ್ಗೆ, ಮೆಸ್ಸೀಯ ಕೈಗಳೂ ಪಾದಗಳೂ ಚುಚ್ಚಲ್ಪಟ್ಟದ್ದರ ಬಗ್ಗೆ, ಆತನ ಬಟ್ಟೆಗಳು ಹಂಚಿಕೊಳ್ಳಲ್ಪಟ್ಟದ್ದರ ಬಗ್ಗೆ (ವಚನಗಳು 6-8, 16-18) ಮಾತಾಡುತ್ತಾನೆ. ಮತ್ತು ಅದು ಸ್ಮರಣೀಯವಾದ ಮಾತುಗಳನ್ನು ಒಳಗೊಂಡಿರುತ್ತದೆ: "ನನ್ನ ಮೇಲ್ಹೊದಿಕೆಯನ್ನು ತಮ್ಮಲ್ಲಿ ಪಾಲು ಮಾಡಿಕೊಳ್ಳುತ್ತಾರೆ, ನನ್ನ ಅಂಗಿಗೋಸ್ಕರ ಚೀಟು ಹಾಕುತ್ತಾರೆ" (ವಚನ 18).

ಅಂಥ ಪರಿಶುದ್ಧ ಬರಹಗಳ ನೆರವೇರುವಿಕೆಯು ನಮಗೆ ಏನನ್ನು ಹೇಳುತ್ತದೆ? ಯೇಸುವಿನ ಮರಣವು ಮುಂತಿಳಿಸಲ್ಪಟ್ಟಿತ್ತೆಂದು ತೋರಿಸುವುದಲ್ಲದೇ, ಬೈಬಲು ದೈವಿಕವಾಗಿ ಪ್ರೇರೇಪಿಸಲ್ಪಟ್ಟಿದ್ದು ಮತ್ತು ಯೇಸುವು ದೇವರ ಕುಮಾರನಾಗಿದ್ದಾನೆ ಎಂಬುದನ್ನು ಅದು ರುಜುವಾತು ಪಡಿಸುತ್ತದೆ. ಯಾವುದೇ ಜನರು ತಮ್ಮ ಸ್ವಂತ ಜ್ಞಾನದಿಂದ ಮತ್ತು ಬಲದಿಂದ, ಮನುಷ್ಯನ ಮರಣದ ಬಗ್ಗೆ, *ವಿಶೇಷವಾಗಿ ಮನುಷ್ಯನು ಜನಿಸುವದಕ್ಕಿಂತ ನೂರಾರು ವರ್ಷಗಳ ಮೊದಲು, ಆಗ್ರಾಹ್ಯವಾದ ರೀತಿಯಲ್ಲಿ ಬೈಬಲಿನ ಗ್ರಂಥಕರ್ತರಂತೆ ಸ್ಪಷ್ಟವಾಗಿ ಮುಂತಿಳಿಸಲಾರರು.* ಹಾಗಾದರೆ, ಪ್ರವಾದಿಗಳು ಅದನ್ನು ಹೇಗೆ ಮಾಡಿದರು? ದೇವರ ಬಲದಿಂದ! ಆ ಪ್ರವಾದನೆಗಳ ನೆರವೇರುವಿಕೆಯು ಯೇಸುವು ನಿಜವಾಗಿಯೂ ದೇವರು ಕಳುಹಿಸಿದ ಮೆಸ್ಸೀಯನು ಮತ್ತು ಪ್ರವಾದಿಗಳು ಮೆಸ್ಸೀಯನ ಬಗ್ಗೆ ಬರೆದಾಗ ದೇವರಿಂದ ನಿಜವಾಗಿಯೂ ಪ್ರೇರೇಪಿಸಲ್ಪಟ್ಟಿದ್ದರೆಂದು ರುಜುವಾತು ಪಡಿಸುತ್ತದೆ.

## ಅದು ಯೋಜಿಸಲ್ಪಟ್ಟಿತ್ತು

ಯೇಸುವಿನ ಮರಣವು ಯೋಜಿಸಲ್ಪಟ್ಟಿದ್ದರಿಂದ ಅದು ಭಿನ್ನವಾಗಿತ್ತು. ಧರ್ಮಶಾಸ್ತ್ರದ ಕೈಗಳಲ್ಲಿ ಬಿದ್ದು ಹೋದ ಒಳ್ಳೆ ಮನುಷ್ಯನು ಮಾತ್ರವೇ ಆತನಾಗಿರಲಿಲ್ಲ. ಆತನ ಮರಣವು ಬೇಕೆಂತಲೇ ಆದದ್ದು ಇಡೀ ಜೀವಿತವು ಶಿಲುಬೆಯ ನೆರಳಿನಲ್ಲಿ ನಡಿಸಲ್ಪಟ್ಟಿತು. ತನ್ನ ಜನನದ ಸಮಯದಿಂದ ಆತನು ಸಾಯುವ ದಿನದವರೆಗೆ, ಗೊಲ್ಗೊಥಾದ ಮೇಲೆ ಆತನಿಗೆ ನೇಮಕವಾದದ್ದರ ಕಡೆಗೆ ಧೈರ್ಯದಿಂದ ಆತನು ನಡೆದನು.

ಪಂಚಾಶತ್ತಮದ ದಿನದಂದು, ಪೇತ್ರನು ಯೇಸುವಿನ ಬಗ್ಗೆ ಹೇಳುತ್ತ, ಆತನನ್ನು ಶಿಲುಬೆಗೆ ಹಾಕಲು ಕಾರಣರಾದವರ ಬಗ್ಗೆ ಹೀಗೆ ಹೇಳಿದನು, "ಈ ಯೇಸು ದೇವರ ಸ್ಥಿರಸಂಕಲ್ಪಕ್ಕೂ ಭವಿಷದ್ ಜ್ಞಾನಕ್ಕೂ ಅನುಸಾರವಾಗಿ ಒಪ್ಪಿಸಿರಲು ನೀವು ಅನ್ಯಜನರ ಕೈಯಿಂದ ಆತನನ್ನು ಶಿಲುಬೆಗೆ ಹಾಕಿಸಿ ಕೊಂದಿರಿ" (ಅಪೊಸ್ತಲರ ಕೃತ್ಯಗಳು 2:23). ದೇವರ ಸ್ಥಿರಸಂಕಲ್ಪ ಮತ್ತು ಭವಿಷದ್ ಜ್ಞಾನಕ್ಕೆ ಅನುಸಾರವಾಗಿ ಯೇಸುವು ಶಿಲುಬೆಗೆ ಹಾಕಲ್ಪಟ್ಟನು. ದೇವರು ಅದನ್ನು ಆ ರೀತಿಯಲ್ಲಿ ಯೋಜಿಸಿದನು.

ಹೀಗೆ ಕಲ್ವಾರಿಯ ಮೇಲೆ ಸಂಭವಿಸಿದ್ದು ದುಷ್ಟಜನರಿಂದ ತೆಗೆದು ಹಾಕಲ್ಪಟ್ಟ ಯೋಜನೆಯ ವಿಷಯವಾಗಿರಲಿಲ್ಲ. ಅದು ದೇವರು ಯೋಜಿಸಿದಂತೆ ಆಯಿತು. ಇದು ಯೇಸುವನ್ನು ಕೊಂದವರ ಅಪರಾಧವನ್ನು ತೆಗೆದು ಹಾಕಲಿಲ್ಲ. ಜನಸಮೂಹದಲ್ಲಿದ್ದ ಪ್ರತಿಯೊಬ್ಬರೂ, "ಅವನನ್ನು ಶಿಲುಬೆಗೆ ಹಾಕಿಸು" ಎಂದು ಕೂಗಿದರು. ಹಾಗೆ ಮಾಡಿದ್ದು ಅವರ ಸ್ವಂತ ಆಯ್ಕೆಯಿಂದ. ಪ್ರತಿಯೊಬ್ಬನೂ ತನ್ನ ಸ್ವಂತ ಚಿತ್ತದಿಂದ ಯೇಸುವನ್ನು ಶಿಲುಬೆಗೆ ಹಾಕುವದನ್ನು ಆಯ್ದುಕೊಂಡನು ಮತ್ತು ಪ್ರತಿಯೊಬ್ಬನು ಆ ಆಯ್ಕೆ ಮಾಡುವದರಿಂದ ಯೇಸುವಿನ ಮರಣದ ಅಪರಾಧಿಯಾಗಿದ್ದಾನೆ.

ಯೇಸುವು ಯಾಕೆ ಮರಣ ಹೊಂದಿದನು? ದೇವರು ಆತನ ಮರಣವನ್ನು ಯೋಜಿಸಿದ ಕಾರಣದಿಂದ ಆತನು ಮರಣ ಹೊಂದಿದನು. ಯೇಸುವಿನ ಮರಣವು, ದೇವರ ಬದಲಾಗದ ಯೋಜನೆಯ ಪ್ರಕಾರವಾಗಿ ದೇವರ ನಿತ್ಯ ಉದ್ದೇಶದ ಭಾಗವಾಗಿತ್ತು. ಇದು ಯೇಸುವಿನ ಮರಣವನ್ನು ಅದ್ವಿತೀಯವಾದದ್ದನ್ನಾಗಿ ಮಾಡುತ್ತದೆ.

## ಅದರ ಸುತ್ತಲಿನ ಘಟನೆಗಳು

ಯೇಸುವು ಶಿಲುಬೆಗೆ ಹಾಕಲ್ಪಟ್ಟದ್ದರ ಸುತ್ತಲಿನ ಘಟನೆಗಳ ಕಾರಣದಿಂದ ಯೇಸುವಿನ ಮರಣವು ಭಿನ್ನವಾಗಿರುತ್ತದೆ. ಮತ್ತಾಯ 27 ಮೂರು ಗಮನೀಯವಾದ ನಾಲ್ಕು ಘಟನೆಗಳನ್ನು ಹೇಳುತ್ತದೆ: ಮೂರು ತಾಸುಗಳ ವರೆಗೆ ಅಲೌಕಿಕ ಕತ್ತಲೆ (ವಚನ 45), ಮೇಲಿನಿಂದ ಕೆಳಗಿನವರೆಗೆ ದೇವಾಲಯದ ಪರದೆಯು ಹರಿದು ಹೋದದ್ದು (ವಚನ 51), ಮತ್ತು ಭೂಕಂಪ (ವಚನ 51) ಮತ್ತು ಯೇಸುವಿನ ಪುನರುತ್ಥಾನದ ನಂತರ ಭಕ್ತರ ದೇಹಗಳ ಪುನರುತ್ಥಾನ (ವಚನಗಳು 52, 53).

ಈ ಅದ್ಭುತಗಳು ಶಿಲುಬೆಯ ಮೇಲೆ ವಿಶೇಷವಾದದ್ದು ಸಂಭವಿಸುತ್ತಲಿದೆ - ಅಲೌಕಿಕವಾದದ್ದು ಸಂಭವಿಸುತ್ತಲಿದೆ ಎಂಬುದನ್ನು ನಮಗೆ ಹೇಳುತ್ತವೆ. ಅವು ಘೋಷಿಸುತ್ತವೆ: ಇದು ದೇವರ ಕಾರ್ಯ! ದೇವತ್ವವು ಒಳಗೊಂಡಿರುತ್ತದೆ! ಜನರು ಸೂರ್ಯನನ್ನು ಕತ್ತಲಾಗಿ ಮಾಡಲಾರನು ಆದರೆ ದೇವರು ಮಾಡಬಲ್ಲನು, ಮಾಡಿದನು. ಪರದೆಯನ್ನು ದೇವರು ಮೇಲಿನಿಂದ ಕೆಳಗಿನವರೆಗೆ ಹರಿದನು, ಯಾರು ಅದನ್ನು ಮಾಡಿದರು ಎಂಬುದರ ಬಗ್ಗೆ ತಪ್ಪು ತಿಳುವಳಿಕೆಯಾಗದಂತೆ ಅದು ಕೆಳಗಿನಿಂದ

ಮೇಲಕ್ಕೆ ಹರಿಯಲ್ಪಡಲಿಲ್ಲ. ಜನರು ಭೂಕಂಪವಾಗಲಿಕ್ಕೆ ಕಾರಣರಲ್ಲ, ಆದರೆ ದೇವರು ಅದಕ್ಕೆ ಕಾರಣನು, ಆತನು ಅದನ್ನು ಮಾಡಿದನು. ಜನರು ಸತ್ತವರನ್ನು ಎಬ್ಬಿಸಲಾರರು, ಆದರೆ ದೇವರು ಎಬ್ಬಿಸಬಲ್ಲನು ಮತ್ತು ಆತನು ಹಾಗೇ ಮಾಡಿದನು. ಶಿಲುಬೆಯ ಮೇಲೆ ಮಾನವನ ಚರಿತ್ರೆಯಲ್ಲಿ ಅದ್ವಿತೀಯವಾದದ್ದು ಸಂಭವಿಸಿತು. ದೇವರ ಕುಮಾರನು ಅಲ್ಲಿ ಮರಣ ಹೊಂದಿದನು. ಈ ಅದ್ಭುತಕರವಾದ ಘಟನೆಗಳು ಸಂಗತಿಯನ್ನು ದೃಢಪಡಿಸುತ್ತವೆ.

ಶತಾಧಿಪತಿಯು "ಭೂಕಂಪವನ್ನೂ ನಡೆದ ಸಂಗತಿಗಳನ್ನೂ ನೋಡಿ ಬಹಳ ಹೆದರಿಕೊಂಡು, 'ನಿಜವಾಗಿ ಈತನು ದೇವರ ಕುಮಾರನಾಗಿದ್ದನು!' " ಎಂದು ಹೇಳಿದ್ದ ರಲ್ಲಿ ಆಶ್ಚರ್ಯವಿಲ್ಲ (ಮಾರ್ಕ 27:54).

## ಅದು ಇತರರಿಗಾಗಿದ್ದ ಮರಣವಾಗಿತ್ತು

ಯೇಸುವಿನ ಮರಣವು ಭಿನ್ನವಾಗಿತ್ತು ಯಾಕಂದರೆ ಅದು ಇತರರಿಗಾಗಿದ್ದ ಮರಣ ವಾಗಿತ್ತು. ಆತನ ಮರಣವು ಮುಂತಿಳಿಸಲ್ಪಟ್ಟದ್ದು, ಯೋಜಿಸಲ್ಪಟ್ಟದ್ದು ಮತ್ತು ದೇವರ ಕಾರ್ಯವೂ ಆಗಿದ್ದರಿಂದ ದೇವರ ಉದ್ದೇಶದಲ್ಲಿ ಅದು ಯಾವ ಪಾತ್ರ ವಹಿಸಿತು? ಮುಖ್ಯ ಸಮಸ್ಯೆಯು ಇದಾಗಿದೆ: ಯೇಸುವು ನಿರ್ದೋಷಿಯಾಗಿದ್ದರೆ, ಆಗ ಆತನು, ದೇವರ ಯೋಜನೆಯಲ್ಲಿ, ಯಾಕೆ ಸಾಯಬೇಕಾಗಿತ್ತು?

ಯೇಸುವು ತನಗೋಸ್ಕರವಾಗಿ ಸಾಯದೇ ಇದ್ದುದರಿಂದ, ಆತನು ನಿರ್ದೋಷಿಯೂ ಪಾಪವಿಲ್ಲದವನೂ ಆಗಿದ್ದುದರಿಂದ, ಆತನು ಇತರಿಗಾಗಿ ಮರಣಹೊಂದಿದನು. ಇತರರು ರಕ್ಷಿಸಲ್ಪಡಬೇಕಾಗಿದ್ದರೆ, ಆತನು ಇತರರಿಗಾಗಿ ಸಾಯಬೇಕಾಗಿತ್ತು.

ಕ್ರಿಸ್ತನು ಇತರರಿಗಾಗಿ ಮರಣ ಹೊಂದಿದನು ಎಂದು ಹೊಸ ಒಡಂಬಡಿಕೆಯು ದೃಢವಾಗಿ ಬೋಧಿಸುತ್ತದೆ. "ಇದು ನನ್ನ ರಕ್ತ, ಇದು ಒಡಂಬಡಿಕೆಯ ರಕ್ತ, ಇದು ಪಾಪಗಳ ಕ್ಷಮೆಗಾಗಿ ಬಹು ಜನರಿಗೋಸ್ಕರ ಸುರಿಸಲ್ಪಡುವ ರಕ್ತ" (ಮತ್ತಾಯ 26:28) ಎಂದು ಯೇಸು ಹೇಳಿದನು. "... ನಾವು ಪಾಪಿಗಳಾಗಿದ್ದಾಗಲೇ, ಕ್ರಿಸ್ತನು ನಮ ಗೋಸ್ಕರ ಪ್ರಾಣಕೊಟ್ಟನು" (ರೋಮಾಪುರ 5:8) ಎಂದು ಪೌಲನು ಬರೆದನು. ಪೌಲನ ಪ್ರಕಾರವಾಗಿ, ಸುವಾರ್ತೆಯು "ಕ್ರಿಸ್ತನು ನಮ್ಮ ಪಾಪಗಳಿಗಾಗಿ ಸತ್ತನು" ಎಂಬುದನ್ನು ಒಳಗೊಂಡಿರುತ್ತದೆ (1 ಕೊರಿಂಥ 15:3). ಇಬ್ರಿಯರಿಗೆ ಬರೆದ ಗ್ರಂಥಕರ್ತನು "ದೇವರ ಕೃಪೆಯಿಂದ ಎಲ್ಲರಿಗೋಸ್ಕರ ಮರಣವನ್ನು ಅನುಭವಿಸುವದಕ್ಕಾಗಿ" (ಇಬ್ರಿಯ 2:9) ಕ್ರಿಸ್ತನು ಮಾನವನಾದನೆಂದು ಹೇಳಿದ್ದಾನೆ.

ಯೆಶಾಯ 53, ಅದೇ ಶುಭಸಮಾಚಾರವನ್ನು ಹಳೇ ಒಡಂಬಡಿಕೆಯಲ್ಲಿ ಘೋಷಿಸುತ್ತದೆ. 4ರಿಂದ 6ನೆಯ ವಚನದ ವರೆಗೆ ಹೀಗೆ ಹೇಳುತ್ತದೆ,

> ನಿಜವಾಗಿಯೂ *ನಮ್ಮ* ಸಂಕಷ್ಟಗಳನ್ನು ಅನುಭವಿಸಿದನು; ಅವನು ಹೊತ್ತ ಹೊರೆಯು ನಮ್ಮ ಸಂಕಟವೇ ಹೌದು; ... *ನಮ್ಮ* ದ್ರೋಹಗಳ ದೆಸೆಯಿಂದ ಅವನಿಗೆ ಗಾಯವಾಯಿತು. *ನಮ್ಮ* ಅಪರಾಧಗಳ ನಿಮಿತ್ತ ಅವನು ಜಜ್ಜಲ್ಪಟ್ಟನು; *ನಮಗೆ* ಸುಕ್ಷೇಮವನ್ನುಂಟು ಮಾಡುವ ದಂಡನೆಯನ್ನು ಅವನು ಅನುಭವಿಸಿದನು; ಅವನ ಬಾಸುಂಡೆಗಳಿಂದ *ನಮಗೆ* ಗುಣವಾಯಿತು. ... ನಮ್ಮೆಲ್ಲರ ದೋಷವನ್ನೂ ಯೆಹೋವನು ಅವನ ಮೇಲೆ ಹಾಕಿದನು. (ಒತ್ತಿ ಹೇಳಿದ್ದು ನನ್ನದು.)

ಯೇಸುವು ಇತರರಿಗಾಗಿ ಮರಣ ಹೊಂದಿದನು. ಅದರ ಅರ್ಥವೇನು? ಯೇಸುವು ಇತರರ ಪಾಪಗಳನ್ನು ತನ್ನ ಮೇಲೆ ತೆಗೆದುಕೊಂಡನು; ಅವರ ಪಾಪಗಳ ಅಪರಾಧವನ್ನೂ ದಂಡನೆಯನ್ನೂ ಆತನು ತನ್ನ ಮೇಲೆ ತೆಗೆದುಕೊಂಡನು. ಪೌಲನು ಹೀಗೆ ಹೇಳಿದ್ದಾನೆ,

> ... ದೇವರು ಮನುಷ್ಯರ ಅಪರಾಧಗಳನ್ನು ಅವರ ಲೆಕ್ಕಕ್ಕೆ ಹಾಕದೆ ಲೋಕ ವನ್ನು ಕ್ರಿಸ್ತನಲ್ಲಿ ತನಗೆ ಸಮಾಧಾನ ಪಡಿಸಿಕೊಳ್ಳುತ್ತಿದ್ದನೆಂಬದೇ. ಅದನ್ನು ಸಾರುವ ಸೇವೆಗೆ ನಮ್ಮನ್ನು ನೇಮಿಸಿದ್ದಾನೆ .... ನಾವು ಆತನಲ್ಲಿ ದೇವರಿಗೆ ಸಮರ್ಪಕರಾದ ನೀತಿಸ್ವರೂಪಿಗಳಾಗುವಂತೇ ದೇವರು ಪಾಪ ಜ್ಞಾನವಿಲ್ಲದ ಆತನನ್ನು ನಮಗೋಸ್ಕರ ಪಾಪಸ್ವರೂಪಿಯಾಗ ಮಾಡಿದನು (2 ಕೊರಿಂಥ 5:19, 21).

ಕ್ರಿಸ್ತನು ಶಿಲುಬೆಯ ಮೇಲೆ ಮರಣಹೊಂದಿದಾಗ ಪಾಪವಾಗಿ ಮಾಡಲ್ಪಟ್ಟನು. ನಮಗಾಗಿ ಆತನು ನರಕದ ಬಾಧೆಗಳನ್ನು ಅನುಭವಿಸಿದಂತೆ ನಿನ್ನ ಮತ್ತು ನನ್ನ ಪಾಪಗಳಿಗಾಗಿ ಆತನು ದಂಡವನ್ನು ಸಲ್ಲಿಸಿದನು. ನರಕವು ಸದಾಕಾಲಕ್ಕೂ ಮನುಷ್ಯರು ದೇವರಿಂದ ಬೇರೆಯಾಗಿ ಮಾಡಲ್ಪಟ್ಟ ಸ್ಥಳವಾಗಿದೆ (2 ಥೆಸಲೊನೀಕ 1:9). ಯೇಸುವು ತನ್ನ ಮರಣದ ತಾಸಿನಲ್ಲಿ ಆತನಿಂದ ಬೇರ್ಪಡಿಸಲ್ಪಟ್ಟನು ಮತ್ತು, "ನನ್ನ ದೇವರೆ, ನನ್ನ ದೇವರೆ, ಯಾಕೆ ನನ್ನನ್ನು ಕೈಬಿಟ್ಟಿದ್ದೀ?" ಎಂದು ಕೂಗಿದನು (ಮತ್ತಾಯ 27:46).

ದೇವರು ಯಾಕೆ ಆತನನ್ನು ಕೈಬಿಟ್ಟಿದ್ದನು? ಯಾಕಂದರೆ ಯೇಸುವು ಪಾಪವಾಗಿ ಮಾಡಲ್ಪಟ್ಟಿದ್ದನು! ಯಾಕಂದರೆ ಆತನು ತನ್ನ ಮೇಲೆ ನಮ್ಮೆಲ್ಲರ ಪಾಪಗಳ ಅಪರಾಧವನ್ನು ತೆಗೆದುಕೊಂಡಿದ್ದನು. ಎಲ್ಲಾ - ಪರಿಶುದ್ಧನಾದ ದೇವರು ತನ್ನ ಸನ್ನಿಧಿಯಲ್ಲಿ ಪಾಪವಿರುವಂತೆ ಬಿಡುವದಿಲ್ಲ; ಕ್ರಿಸ್ತನು ಪಾಪವಾಗಿ ಮಾಡಲ್ಪಟ್ಟದ್ದರಿಂದ ಶಿಲುಬೆಯಿಂದ ದೇವರು ಕ್ರಿಸ್ತನಿಂದ ಹಿಂದುರುಗಿ ಹೋಗಬೇಕಾಯಿತು. ವಿಮೋಚಿಸಲ್ಪಡದ ಪಾಪಿಗಳಿಂದ ಎಲ್ಲಾ ನಿತ್ಯತ್ವಕ್ಕೂ ಆತನು ಬೇರೆ ಮಾಡಲ್ಪಡುವಂತೆ ಆತನು ತನ್ನನ್ನು ಕ್ರಿಸ್ತನಿಂದ ಬೇರ್ಪಡಿಸಿಕೊಂಡನು.

ನರಕದ ಯಾತನೆಯನ್ನೇ ಯೇಸುವು ಸಹಿಸಿದನು, ಯಾಕಂದರೆ ಪಾಪಿ ಹೊಂದಬೇಕಾಗಿದ್ದ ಇಡೀ ಶಿಕ್ಷೆಯನ್ನು ಆತನು ಅನುಭವಿಸಿದನು. ನಮ್ಮ ಪಾಪಗಳಿಗಾಗಿ ಕೊಡಬೇಕಾಗಿದ್ದ ಕ್ರಯವನ್ನು ಆತನು ಕೊಟ್ಟನಂತರ ಪಾಪವು ಕೇಳುವ ಇಡೀ ದಂಡನೆಯನ್ನು ಪೂರ್ತಿಯಾಗಿ ಸಹಿಸಿದ ನಂತರ, ಆತನು "ತೀರಿತು," ಎಂದು ಕೂಗಿ ಪ್ರಾಣಬಿಟ್ಟನು.

ಯೇಸುವು ಶಿಲುಬೆಯ ಮೇಲೆ ಯಾಕೆ ಇದ್ದನು? ಆತನು ನಿನ್ನ ಸ್ಥಾನವನ್ನು ನನ್ನ ಸ್ಥಾನವನ್ನೂ ತೆಗೆದುಕೊಂಡನು, ನಮ್ಮ ಸ್ಥಾನದಲ್ಲಿ ಶ್ರಮೆ ಹೊಂದಿದನು. ನಮ್ಮ ಪಾಪಗಳ ಅಪರಾಧವನ್ನು ತನ್ನ ಮೇಲೆ ತೆಗೆದುಕೊಂಡು ಆತನು ನಮಗಾಗಿ ಮರಣಪಟ್ಟದ್ದರಿಂದ, ನಾವು ರಕ್ಷಿಸಲ್ಪಡುವವರಾದೆವು! ನಮ್ಮ ಪಾಪಗಳಿಗಾಗಿ ದಂಡವನ್ನು ಆತನು ಕೊಟ್ಟದ್ದರಿಂದ, ನಾವು ದಂಡವನ್ನು ತರಬೇಕಾಗಿರುವದಿಲ್ಲ. ನರಕದ ಯಾತನೆಯನ್ನು ಆತನು ಸಹಿಸಿಕೊಂಡದ್ದರಿಂದ, ನಾವು ನರಕಕ್ಕೆ ಹೋಗ ಬೇಕಾಗಿರುವದಿಲ್ಲ.

ಮಾನವನ ಚರಿತ್ರೆಯಲ್ಲಿ, ಒಬ್ಬ ಮನುಷ್ಯನ ಮರಣವು ಇತರರ ದೈಹಿಕ ರಕ್ಷಣೆಯಲ್ಲಿ ಬಹಳ ಸಲ ಪರಿಣಾಮ ಗೊಂಡಿರುವುದು. ಆದರೆ ಕ್ರಿಸ್ತನು ಮಾತ್ರವೇ, ದೇಹದಾರಿಯಾದ ದೇವರು, ಎಲ್ಲಾ ಜನರ ಪಾಪಗಳನ್ನು ತನ್ನ ಮೇಲೆ ತೆಗೆದುಕೊಂಡು,

ಆ ಪಾಪಗಳಿಗಾಗಿ ದಂಡವನ್ನು ಕೊಡಬಲ್ಲವನಾಗಿದ್ದನು. ಕ್ರಿಸ್ತನ ಮರಣವು ಮಾತ್ರವೇ ಎಲ್ಲರ ಆತ್ಮಿಕ ರಕ್ಷಣೆಗಾಗಿ ಅವಕಾಶವನ್ನು ಒದಗಿಸಿ ಕೊಡಬಲ್ಲದು.

## ಅದು ಪುನರುತ್ಥಾನದಿಂದ ಹಿಂಬಾಲಿಸಲ್ಪಟ್ಟಿತು

ಯೇಸುವಿನ ಮರಣವು ಭಿನ್ನವಾಗಿತ್ತು, ಯಾಕಂದರೆ ಅದು ಪುನರುತ್ಥಾನದಿಂದ ಹಿಂಬಾಲಿಸಲ್ಪಟ್ಟಿತು. ವಾರದ ಮೊದಲನೆಯ ದಿನದಂದು, ಒಬ್ಬ ದೇವದೂತನು ಸಮಾಧಿಯ ಬಾಗಿಲಿಗೆ ಮುದ್ರೆ ಹಾಕಲ್ಪಟ್ಟಿದ್ದ ಕಲ್ಲನ್ನು ಉರುಳಿಸಿದನು, ಮತ್ತು ಯೇಸುವು ಸತ್ತವರೊಳಗಿಂದ ಎದ್ದು ಬಂದನು. ಸಮಾಧಿಗೆ ಬಂದ ಸ್ತ್ರೀಯರಿಗೆ ದೇವದೂತನು, "ನೀವು ಹೆದರಬೇಡಿರಿ; ಶಿಲುಬೆಗೆ ಹಾಕಲ್ಪಟ್ಟಿದ್ದ ಯೇಸುವನ್ನು ಹುಡುಕುತ್ತಿರೆಂದು ಬಲ್ಲೆನು; ಆತನು ಇಲ್ಲಿ ಇಲ್ಲ; ತಾನು ಹೇಳಿದಂತೆ ಎದ್ದಿದ್ದಾನೆ" (ಮತ್ತಾಯ 28:5, 6) ಎಂದು ಹೇಳಿದನು. ಯೇಸುವು ಸತ್ತವರೊಳಗಿಂದ ಎಬ್ಬಿಸಲ್ಪಟ್ಟನು; ಈ ರೀತಿಯಲ್ಲಿ ಆತನ ಮರಣವು ಅದ್ವಿತೀಯವಾದದ್ದಾಗಿದೆ.

ಯೇಸುವು ತಾನು ಮರಣದ ಮೇಲೆ ಜಯಶಾಲಿಯಾಗುವಂತೆ ಯೇಸುವು ಸತ್ತವರೊಳಗಿಂದ ಎಬ್ಬಿಸಲ್ಪಟ್ಟನು. ಆತನು ಸತ್ತು ಹಾಗೆಯೇ ಉಳಿದಿದ್ದರೆ, ಮರಣವು ಜಯಶಾಲಿಯಾಗುತ್ತಿತ್ತು, ಆದರೆ ಕ್ರಿಸ್ತನು ಸತ್ತವರೊಳಗಿಂದ ಎಬ್ಬಿಸಲ್ಪಟ್ಟದ್ದರಿಂದ, ಆತನು ಮರಣದ ಮೇಲೆ ಜಯ ಸಾಧಿಸಿದನು.

ಈ ಜಯದ ಮುಖಾಂತರವಾಗಿ, ಆತನು "ಪವಿತ್ರವಾದ ಆತ್ಮವುಳ್ಳವನಾಗಿದ್ದು ಸತ್ತ ಮೇಲೆ ಜೀವಿತನಾಗಿ ಎದ್ದು ಬಂದ ಮಹತ್ಕಾರ್ಯದಿಂದ ದೇವ ಕುಮಾರನೆಂದು ನಿರ್ಣಯಿಸಲ್ಪಟ್ಟವನು" ಆಗಿದ್ದಾನೆ (ರೋಮಾಪುರ 1:4). ಪುನರುತ್ಥಾನವು ಕ್ರಿಸ್ತನ ದೈವತ್ವದ ಬಲವುಳ್ಳ ಪ್ರದರ್ಶನವಾಗಿದೆ. ಅದು ಆತನು ಯಾರಾಗಿದ್ದಾನೆಂದು ಆತನು ಘೋಷಿಸಿದ್ದನೋ, ಅದಾಗಿದ್ದಾನೆ. ಅಂದರೆ: ದೇವರ ಕುಮಾರನು ಆಗಿದ್ದಾನೆ.

ಆತನು ದೇವರ ಕುಮಾರನಾಗಿದ್ದುದರಿಂದ, ಶಿಲುಬೆಯ ಮೇಲಿನ ಆತನ ಯಜ್ಞವು ಪರಿಣಾಮಕಾರಿಯಾದದ್ದಾಗಿದೆ ಕ್ರಿಸ್ತನು ತನ್ನ ಮರಣದಿಂದ ನಿನಗೆ ಒಂದು ಚೆಕ್ಕನ್ನು ಬರೆದಂತೆ ಆಗಿರುತ್ತದೆ. ಅದು ನಿನ್ನ ಹೆಸರಿಗೆ ಮಾಡಲ್ಪಟ್ಟಿದೆ. ಆ ಚೆಕ್ಕಿನ ಮೊತ್ತವೇನು? ಅದು ರಕ್ಷಣೆಗಾಗಿ, ನಿತ್ಯಜೀವಕ್ಕಾಗಿ ಮಾಡಲ್ಪಟ್ಟಿದೆ - ಅಷ್ಟನ್ನು ನಿನಗೆ ಕೊಡಲು ಆತನು ವಾಗ್ದಾನ ಮಾಡಿದ್ದಾನೆ. ಅದು ಕ್ರಿಸ್ತನಿಂದಲೇ ರುಜುಹಾಕಲ್ಪಟ್ಟಿರುತ್ತದೆ. ಆದರೆ ಆ ಚೆಕ್ಕನ್ನು ಪುನರುತ್ಥಾನವು ದೃಢಪಡಿಸುತ್ತದೆ. ಚೆಕ್ ಒಳ್ಳೆಯದಾಗಿರುತ್ತದೆಂದು ದೇವರ ಭರವಸೆಯಾಗಿರುತ್ತದೆ. ನಾವು ಹೀಗೆ ನಮ್ಮ ರಕ್ಷಣೆಯ ಬಗ್ಗೆ ಇಮ್ಮಡಿ ನಿಶ್ಚಿತತೆಯುಳ್ಳ ವರಾಗಿರಬಹುದು: ನಮಗಾಗಿ ಕ್ರಿಸ್ತನು ಮರಣಹೊಂದಿದ್ದರಿಂದ ನಾವು ರಕ್ಷಿಸಲ್ಪಡುವೆವೆಂಬ ನಿಶ್ಚಿತತೆಯುಳ್ಳವರಾಗಿರಬಹುದು, ಮತ್ತು ಮರಣ ಹೊಂದಿದಾತನು ಸತ್ತವರೊಳಗಿಂದ ಎಬ್ಬಿಸಲ್ಪಟ್ಟದ್ದರಿಂದ ನಾವು ರಕ್ಷಿಸಲ್ಪಡುವೆವೆಂಬ ನಿಶ್ಚಿತತೆಯುಳ್ಳವರಾಗಿರುವೆವು.

## ಮುಕ್ತಾಯ

ಹಾಗಾದರೆ, ಯಾಕೆ ಯೇಸುವು ಸಾಮಾನ್ಯ ಅಪರಾಧಿಯಂತೆ ಮರಣ ಹೊಂದಿದನು? ಆತನ ಮರಣವು ಇತರ ಸಾವಿರಾರು ಜನರ ಮರಣದಂತೆ ಇದ್ದರೂ, ಅದು ಅದ್ವಿತೀಯವಾದದ್ದು ಆಗಿತ್ತು.

ಆ ಅದ್ವಿತೀಯ ಮರಣವನ್ನು ಯೇಸುವು ಯಾಕೆ ಹೊಂದಿದನು? ಆತನ ಜೀವನ, ಮರಣ ಮತ್ತು ಪುನರುತ್ಥಾನದಿಂದ ನಾವು ರಕ್ಷಿಸಲ್ಪಡಲಿಕ್ಕಾಗುವಂತೆ ಆತನು ಮರಣ ಹೊಂದಿದನು ಎಂಬುದು ಸುವಾರ್ತೆಯ ಶುಭವಾರ್ತೆ ಆಗಿದೆ.

ಕೆಟ್ಟ ವಾರ್ತೆಯೂ ಸಹ ಸುವಾರ್ತೆಯೊಂದಿಗೆ ಸಂಬಂಧಿಸಲ್ಪಟ್ಟಿರುತ್ತದೆ. ಪಾಪವು ನಿಜವಾದದ್ದಾಗಿದೆ, ಮತ್ತು ಪಾಪವು ನಿಮ್ಮನ್ನು ಶಿಕ್ಷಿಸುತ್ತದೆ. ಪಾಪ ಮಾಡುವವರು ಮತ್ತು ಕ್ರಿಸ್ತನಿಂದ ಕೊಡಲ್ಪಡುವ ರಕ್ಷಣೆಯನ್ನು ತಿರಸ್ಕರಿಸುವವರು ಎಂದೆಂದಿಗೂ ತಪ್ಪಿ ಹೋಗುವರು. ಒಂದು ದಿನ ನ್ಯಾಯತೀರ್ವಿಕೆಯು ಬರಲಿಕ್ಕಿದೆ ಮತ್ತು ನಾವೆಲ್ಲರೂ ನ್ಯಾಯ ತೀರಿಸಲ್ಪಡುವೆವು. ನ್ಯಾಯತೀರ್ವಿಕೆಯ ನಂತರ ಪರಲೋಕ ಇಲ್ಲವೇ ನರಕ ಬರುವುದು, ಅದು ನಿತ್ಯತ್ವಕ್ಕಾಗಿರುವುದು. ಆತನ ಮರಣದಿಂದ ನೀವು ರಕ್ಷಿಸಲ್ಪಟ್ಟಿರದಿದ್ದರೆ, ಈ ಸಂಗತಿಗಳಲ್ಲಿ ಆದರಣೆಯಾಗಲೀ, ಸಮಾಧಾನಪಡಿಸುವಿಕೆ ಯಾಗಲೀ ಇರುವದಿಲ್ಲ.

ಪಾಪ, ನ್ಯಾಯತೀರ್ವಿಕೆ ಮತ್ತು ನರಕ ಇವು ನಿನಗಾಗಿ ಭಯಾನಕವಾದವುಗಳಾಗಿರಬಾರದು. ಕ್ರಿಸ್ತನು ಪಾಪದ ಶಿಕ್ಷೆಯೊಂದಿಗೆ ಸಂಬಂಧಿಸಿದ ಭಯವನ್ನು ತೆಗೆದುಹಾಕಲು ಮರಣ ಹೊಂದಿದನು. ಆತನ ಮರಣದ ಮುಖಾಂತರವಾಗಿ ರಕ್ಷಿಸಲ್ಪಡುವದರಿಂದ ನೀವು ಪಾಪದ ಶಿಕ್ಷೆಯಿಂದ ವಿಮೋಚಿಸಲ್ಪಡಬಹುದು.

ಟಿಪ್ಪಣಿಗಳು

[1]Burton Coffman, *Commentary on Matthew* (Austin, Tex.: Firm Foundation Publishing House, 1979), 470. [2]James Hastings, ed., *Hasting Bible Dictionary* (NewYork: Charles Scribners Sons, 1898), 1:193.

© 2009 Truth for Today